# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ.**304/2022** ಡಿ.ಡಬ್ಲ್ಯೂ .1

ದಿನಾಂಕಃ 13-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ವಾದಿಗಳ ಪರ ವಕೀಲರಿಂದಃ-

ವಾದಿಯರು ನನ್ನ ಅಕ್ಕಂದಿರು ಎಂದರೆ ಸರಿ. ನಿಪಿ. 1 ರ ವಂಶ ವೃಕ್ಷ ಸರಿ ಇದಿಯೇ ಎಂದರೆ ಹೌದು. ನನ್ನ ತಂದೆ ವ್ಯವಸಾಯ ಮತ್ತು ITI ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸುಮಾರು 35-40 ವರ್ಷಗಳ ಹಿಂದೆ ನಿವೃತ್ತರಾಗಿರುತ್ತಾರೆ. ನನ್ನ ತಾಯಿ 1990 ರಲ್ಲಿ ಮತ್ತು ನನ್ನ ತಂದೆ 2008 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಜನನ ದಿನಾಂಕಃ 18-04-1973. ನಾನು ದ್ವಿತಿಯ PUC ಯನ್ನು 1992-93 ರ ಸಾಲಿನಲ್ಲಿ ಓದಿದ್ದೇನೆ. ಆನಂತರ ನಾನು ಕ್ಯಾಬ್ ಚಾಲಕನಾಗಿ ಸುಮಾರು 5-6 ವರ್ಷ ಕೆಲಸ ಮಾಡಿದ್ದೇನೆ. ಆ ನಂತರ ದಾವಾ ಐಟಂ ನಂ. 2 ರಲ್ಲಿ ವ್ಯವಸಾಯ ಮಾಡುತ್ತಿದ್ದೇನೆ.

ನನ್ನ ತಂದೆ ಆರೋಗ್ಯವಾಗಿದ್ದಾಗ 3 ನೇ ವಾದಿ ಮನೆಯಲ್ಲಿ ವಾಸ ಇರುತ್ತಿದ್ದರು ಎಂದರೆ ಸುಳ್ಳು. ಅದೇ ರೀತಿ ಅನಾರೋಗ್ಯದ ಕಾಲದಲ್ಲಿಯೂ ಸಹ 3 ನೇ ವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ದಾವಾ ಐಟಂ ನಂ. 2 ಪಿತ್ರಾರ್ಜಿತ ಸ್ವತ್ತು ಎಂದರೆ ಹೌದು. ಸಾಕ್ಷಿ ಪುನಃ ಸದರಿ 1 ಎಕರೆ 20 ಗುಂಟೆ ಪೈಕಿ 1 ಎಕರೆ ಸ್ವಯಾರ್ಜಿತ ಸ್ವತ್ತು ಆಗಿದ್ದು, 20 ಗುಂಟೆ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 108/1 ರಲ್ಲಿ 1 ಎಕರೆ 20 ಗುಂಟೆ ಮೂಲತಃ ನನ್ನ ತಾತ ಉತ್ತನಲ್ಲಪ್ಪನವರ ಹೆಸರಿನಲ್ಲಿತ್ತು ಎಂದರೆ ಗೊತ್ತಿಲ್ಲ. 1989-90 ರಲ್ಲಿ ನನ್ನ ತಂದೆಯ ಹೆಸರಿಗೆ ವಿಭಾಗದಂತೆ 1 ಎಕರೆ 20 ಗುಂಟೆ ಬಂದಿರುತ್ತದೆ ಎಂದರೆ 1 ಎಕರೆ ಮಾತ್ರ ನನ್ನ ತಂದೆಗೆ ಬಂದಿದ್ದು, 20 ಗುಂಟೆ ಬೈಯ್ಯಮ್ಮನವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆಮರಣ ಹೊಂದುವ ವರೆಗೂ ಅವರ ಹೆಸರಿನಲ್ಲಿ ಒಟ್ಟು 1 ಎಕರೆ 20 ಗುಂಟೆ ಖಾತೆ ಇತ್ತು ಎಂದರೆ ಹೌದು.

2012 ರಲ್ಲಿ ದಾವಾ ಐಟಂ ನಂ. 2 ರ ಖಾತೆಯನ್ನು ನನ್ನ ಹೆಸರಿಗೆ  ಪವತಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ಆ ಸಮಯಕ್ಕೆ ವಂಶ ವೃಕ್ಷ ಮತ್ತು ನನ್ನ ತಂದೆ ಮರಣ ಪ್ರಮಾಣ ಪತ್ರ ನೀಡಬೇಕಿತ್ತು ಎಂದರೆ ಹೌದು. ನಾನು ನನ್ನ ತಂದೆಗೆ ಒಬ್ಬನೆ ಮಗ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸುಳ್ಳು.

ಮುಂದೂವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.